ನೋಡಿಕೊಳ್ಳುವುದು, ನಮ್ಮ ಜವಾಬ್ದಾರಿಯಾಗಿದೆ ಅದಕ್ಕೆ ಬೇಕಾದ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ

ಮಾನ್ಯ ಸದಸ್ಯರು ಮೀನುಗಾರರಿಗೆ ಮನೆಗಳನ್ನು ಕೊಡುವ ವಿಚಾರದಲ್ಲಿ ನಮ್ಮ ಕ್ಷೇತ್ರದಲ್ಲಿ ಕೇವಲ 10 ಮನೆಗಳನ್ನು ಕೊಟ್ಟಿದ್ದಾರೆ ಬೇರೆ ಕ್ಷೇತ್ರಗಳಲ್ಲಿ 100 ಮನೆಗಳನ್ನು ಕೊಟ್ಟಿದ್ದಾರೆ ಈ ರೀತಿ ಏಕೆ ತಾರತಮ್ಯವಾಗಿದೆ ಮೀನುಗಾರರು ಎಲ್ಲರೂ ಒಂದೇ ಅಲ್ಲವೇ ?

ಶ್ರೀ ಬಿ ನಾಗರಾಜ ಶೆಟ್ಟಿ ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಗೆ ಸಂಬಂಧಪಟ್ಟಿಲ್ಲ ಈ ವಿಷಯ ಬೇರೆ ಆಗಿದೆ ಇದಕ್ಕೆ ಸಂಬಂಧಪಟ್ಟಂತೆ ಪ್ರಶ್ನೆಕೇಳಿದರೆ ಉತ್ತರ ಕೊಡುತ್ತೇವೆ

ಅಧ್ಯಕ್ಷರು ಮಾನ್ಯ ಸಚಿವರ ಬಳಿ ಈಗ ಮಾಹಿತಿ ಇಲ್ಲ ತಾವು ಬೇರೆ ಪ್ರಶ್ನೆಯನ್ನು ಕಳುಹಿಸಿ, ಅಥವಾ ಮಾನ್ಯ ಮುಖ್ಯಮಂತ್ರಿಯವರ ಹತ್ತಿರ ಹೋಗಿ ಮಾತನಾಡಿ

ಹಳದಿಪಡಿತರ ಚೀಟಿ ವಿತರಣೆ

52(264) ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯಾತ್ ಖಾನ್ (ಹುಬ್ಬಳ್ಳಿ) ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆ ವ್ಯಾಪ್ತಿಯ ಕಡುಬಡವರಿಗೆ, ದೀನದಲಿತರಿಗೆ, ಹಿಂದುಳಿದವರಿಗೆ ಹಳದಿ ಪಡಿತರ ಚೀಟಿ ಹಂಚುವಲ್ಲಿ ಅವ್ಯವಸ್ಥೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಪಾಲಿಕೆ ವ್ಯಾಪ್ತಿಯಲ್ಲಿ ಹಳದಿ ಪಡಿತರ ಚೀಟಿಗಾಗಿ ಬಂದಿರುವ ಅರ್ಜಿಗಳು ಎಷ್ಟು ,

ಇ) ಹಳದಿ ಪಡಿತರ ಚೀಟಿ ನೀಡುವುದಕ್ಕೆ ಸರ್ಕಾರ ವಿಧಿಸಿರುವ ಮಾನದಂಡ ಯಾವುದು ,

ಈ) ಶ್ರೀಮಂತರಿಗೆ ಹಳದಿ ಪಡಿತರ ಚೀಟಿ, ಬಡತನ ರೇಖೆಗಿಂತ ಕೆಳಗಿರುವವರಿಗೆ ನೀಲಿ ಪಡಿತರ ಚೀಟಿ ನೀಡಿರುವುದು ಸರಿಯೇ ,

ಉ) ಈ ರೀತಿ ತಪ್ಪೆಸಗಿದ ಅಧಿಕಾರಿ ಹಾಗೂ ಸಿಬ್ಬಂದಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಗೋವಿಂದ ಎಂ ಕಾರ್ಜೋಳ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು)

ಅ) ರಾಜ್ಯಾದ್ಯಂತ ಕೈಗೊಳ್ಳಲಾದ ಮನೆ ಮನೆ ಸಮೀಕ್ಷೆಯ ಪ್ರಕಾರ ಹುಬ್ಬಳ್ಳಿ ಧಾರವಾಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯೂ ವಿವಿಧ ವರ್ಗವಾರು ಪಡಿತರ ಚೀಟಿಗಳ ವಿತರಣೆಗೆ ಫಲಾನುಭವಿಗಳನ್ನು ಗುರುತಿಸಲಾಗಿರುತ್ತದೆ ಈ ರೀತಿ ಗುರುತಿಸಲಾದ ಫಲಾನುಭವಿಗಳಿಗೆ ಆಯಾ

ವರ್ಗವಾರು ತಾತ್ಕಾಲಿಕ ಪಡಿತರ ಕೂಪನ್‌ಗಳನ್ನೂ ಸಹ ವಿತರಿಸಲಾಗಿರುತ್ತದೆ ಆದರೆ, ಈ ರೀತಿ ವಿತರಿಸಲಾಗಿರುವ ಕೂಪನ್‌ಗಳಲ್ಲಿ ಲೋಪದೋಷಗಳುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ

ಆ) ಮನೆ ಮನೆ ಸಮೀಕ್ಷೆಯ ವೇಳೆ ವಿವಿಧ ವರ್ಗವಾರು ಗುರುತಿಸಲಾದ ಫಲಾನುಭವಿಗಳ ವಿವರ ಕೆಳಕಂಡಂತಿದೆ

ಪಡಿತರ ಪ್ರದೇಶ	ಗುರುತಿಸಲಾದ ಫಲಾನುಭವಿಗಳು				
	ಅನ್ನಪೂರ್ಣ	ಅಂತ್ಯೋದಯ ಅನ್ನ	ಅಕ್ಷಯ	ಎಪಿಎಲ್	ಒಟ್ಟು
ದಾರವಾಡ	147	2626	21568	31714	56055
ಹುಬ್ಬಳ್ಳಿ	286	5590	47804	60101	113781

ಮೇಲ್ಕಂಡಂತೆ ಗುರುತಿಸಲಾದ ಫಲಾನುಭವಿಗಳಿಗೆ ತಾತ್ಕಾಲಿಕ ಪಡಿತರ ಕೂಪನ್‌ಗಳನ್ನು ವಿತರಿಸಲಾಗಿದ್ದು, ಆ ನಂತರ ಸಾರ್ವಜನಿಕರಿಂದ ವಿವಿಧ ವರ್ಗವಾರು ಪಡಿತರ ಚೀಟಿಯನ್ನು ಕೋರಿ ಅಹವಾಲನ್ನು ಸ್ವೀಕರಿಸಲಾಗಿರುತ್ತದೆ

ಪಡಿತರ ಪ್ರದೇಶ	ಪಡಿತರ ಚೀಟಿ ಕೋರಿ ಸ್ವೀಕರಿಸಿರುವ ಅಹವಾಲುಗಳು				
	ಡೆಮೊ ಗ್ರಾಫಿಕ್	ವರ್ಗ ಬದಲಾವಣೆ	ಹೊಸ ಪ ಚೀಟಿ ಕೋರಿ	ಇತರೆ	ಒಟ್ಟು
ಧಾರವಾಡ	2278	4372	44512	1281	52443
ಹುಬ್ಬಳ್ಳಿ	6726	10348	81970	682	99726

ಇ) ಕುಟುಂಬದ ವಾರ್ಷಿಕ ಆದಾಯವು ಗ್ರಾಮಾಂತರ ಪ್ರದೇಶದಲ್ಲಿ ರೂ 12,000/– ಮತ್ತು ಪಟ್ಟಣ ಪ್ರದೇಶಗಳಲ್ಲಿ ರೂ 17,000/– ಎಂಬುದಾಗಿ ನಿಗಧಿ ಪಡಿಸಲಾಗಿದೆ ಇದರ ಜೊತೆಗೆ ಕುಟುಂಬವು ಬಿಪಿಎಲ್ (ಅಕ್ಷಯ) ಪಡಿತರ ಚೀಟಿ ಹೊಂದಲು ಹಲವು ಮಾನದಂಡಗಳನ್ನು ನಿಗದಿ ಪಡಿಸಲಾಗಿದ್ದು ಕೆಳಕಂಡ ಅರ್ಹತೆಗಳನ್ನುಳ್ಳ ಕುಟುಂಬಗಳಿಗೆ ಎಪಿಎಲ್ ವರ್ಗ ಎಂಬುದಾಗಿ ಪರಿಗಣಿಸಲು ಸೂಚನೆಗಳನ್ನು ನೀಡಲಾಗಿರುತ್ತದೆ

(1) ಮೂರು ಹೆಕ್ಟೇರ್ ಖುಷ್ಕಿ ಜಮೀನು ಅಥವಾ ಅದಕ್ಕಿಂತ ಹೆಚ್ಚು ಭೂಮಿ ಹೊಂದಿರುವವರು ,

(2) ಸ್ಥಿರ ದೂರವಾಣಿ ಹೊಂದಿರುವವರು ,

(3) ಸ್ವಂತವಾಗಿ ಯಾರೇ ಡೀಸಲ್ / ಪೆಟ್ರೋಲ್ ಇಂಧನ ಬಳಸುವ ವಾಹನ ಹೊಂದಿರುವವರು (ಲೂನಾ / ಟಿವಿಎಸ್ ಮೊಪೆಡ್‌ಗಳನ್ನು ಹೊಂದಿರುವವರನ್ನು ಹೊರತುಪಡಿಸಿ) ,

(4) ಬ್ಯಾಂಕ್ / ಸಹಕಾರಿ ಸಂಘಗಳಲ್ಲಿ 100 ಲಕ್ಷಕ್ಕೂ ಮೇಲ್ಪಟ್ಟು ಸಾಲ ಪಡೆದಿರುವವರು ,

(5) ಒಂದು ಚಾಲ್ತಿಯಲ್ಲಿರುವ ಬೋರ್‌ವೆಲ್ ಹೊಂದಿ, ನೀರಾವರಿ ಸೌಕರ್ಯ ಪಡೆಯುತ್ತಿರುವವರು ,

(6) ತಿಂಗಳಿಗೆ ರೂ 1,000/–ಕ್ಕೆ ಕಡಿಮೆ ಇಲ್ಲದೆ ವೇತನ ಪಡೆಯುವ ಸರ್ಕಾರಿ / ಸರ್ಕಾರೇತರ / ಖಾಸಗಿ ಸಿಬ್ಬಂದಿಗಳು ,

(7) ಅದಾಯ ತೆರಿಗೆ ಪಾವತಿಸುವವರು ,

(8) ರಿಜಿಸ್ಟ್ರಡ್ ಕಾಂಟ್ರಾಕ್ಟರ್, ಎಪಿಎಂಸಿ ಟ್ರೇಡರ್ಸ್ / ಕಮೀಷನ್ ಏಜೆಂಟ್ಸ್ / Dealers in seeds / Fertilizers, etc ,

ಒಟ್ಟಾರೆ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಕುಟುಂಬದ ಜೀವನ ಮಟ್ಟವನ್ನು ಕೂಡ ಸಮೀಕ್ಷೆ ಮಾಡಿ ನಿರ್ಣಯಿಸುವುದು

ತದನಂತರ ನಗರ ಪ್ರದೇಶದಕ್ಕೆ ನೀಡಿದ ಮಾರ್ಗಸೂಚಿಗಳಲ್ಲಿ ಈ ಕೆಳಕಂಡ ಮಾನದಂಡಗಳನ್ನು ನಿಗಧಿ ಪಡಿಸಲಾಗಿರುತ್ತದೆ

1) 20' x 30' ಚದರ ಅಡಿ ಅಥವಾ ಅದಕ್ಕಿಂತ ಕಡಿಮೆ ಅಳತೆಯುಳ್ಳ ನಿವೇಶನ ಅಥವಾ ಸರ್ಕಾರದ ಯಾವುದೇ ಗೃಹ ನಿರ್ಮಾಣ ಯೋಜನೆ ಅಡಿಯಲ್ಲಿ ಉಚಿತವಾಗಿ ಮನೆ ನೀಡಿರುವ ಕುಟುಂಬಗಳನ್ನು ಬಿಪಿಎಲ್‌ಗೆ ಒಳಪಟ್ಟಿರುವರೆಂದು ಪರಿಗಣಿಸುವುದು

2) ರಸ್ತೆ ಬದಿಯಲ್ಲಿ ಹಾಗೂ ಸಣ್ಣ ಪ್ರಮಾಣದ ಪೆಟ್ಟಿಗೆ ಅಂಗಡಿಗಳನ್ನು ಇಟ್ಟುಕೊಂಡು ಜೀವನೋಪಾಯಕ್ಕಾಗಿ ವ್ಯವಹಾರ ಮಾಡುತ್ತಿರುವವರನ್ನು ಹೊರತುಪಡಿಸಿ ಉಳಿದ ಸ್ವಂತ ಅಥವಾ ಬಾಡಿಗೆ ಅಂಗಡಿಗಳಲ್ಲಿ ವ್ಯಾಪಾರ ನಡೆಸುತ್ತಿರುವವರು ಎಪಿಎಲ್ ಅಥವಾ ಗೌರವಾನ್ವಿತ ಪಡಿತರ ಚೀಟಿಗೆ ಅರ್ಹರಿರುವವರು

3) ವಾಸದ / ವಾಣಿಜ್ಯ ಉದ್ದೇಶಕ್ಕಾಗಿ ನೀಡಲಾಗಿರುವ ಅಥವಾ ಪಡೆಯಲಾಗಿರುವ ಕಟ್ಟಡಗಳಿಂದ ಬರುವ ಬಾಡಿಗೆ ಮಾಸಿಕ ರೂ 2000/– ಮೀರುವವರು ಬಿಪಿಎಲ್ ಪಡಿತರ ಚೀಟಿಗೆ ಅರ್ಹರಿರುವುದಿಲ್ಲ

ಮೇಲ್ಕಂಡ ಮಾನದಂಡಗಳಿಗೆ ಒಳಪಟ್ಟಲ್ಲಿ ಅಂತಹವರು ಅಕ್ಷಯ ಪಡಿತರ ಚೀಟಿಯನ್ನು ಹೊಂದಲು ಅನರ್ಹರಾಗಿರುತ್ತಾರೆ

ಈ) ಇಲ್ಲ, ಪ್ರಸ್ತುತ ಸಮಗ್ರ ಗಣಕೀಕರಣ ಯೋಜನೆಯಡಿ ಸಾರ್ವಜನಿಕ ಅಹವಾಲುಗಳಿಗೆ ಅವಕಾಶ ಮಾಡಿಕೊಡಲಾಗಿದ್ದು ಅಹವಾಲುಗಳನ್ನು ಪರಿಶೀಲನೆಗೆ ಒಳಪಡಿಸಿ ಸರಿಪಡಿಸಲು ಕ್ರಮ ವಹಿಸಲಾಗಿರುತ್ತದೆ

ಉ) ಪ್ರಸ್ತುತ ಸಮಗ್ರ ಗಣಕೀಕರಣ ಯೋಜನೆಯಡಿ ಸಾರ್ವಜನಿಕ ಅಹವಾಲುಗಳಿಗೆ ಅವಕಾಶ ಮಾಡಿಕೊಡಲಾಗಿದ್ದು ಅಹವಾಲುಗಳನ್ನು ಪರಿಶೀಲನೆಗೆ ಒಳಪಡಿಸಿ ಸರಿಪಡಿಸಲು ಕ್ರಮ ವಹಿಸಲಾಗಿರುತ್ತದೆ ಈ

ಕ್ರಮವನ್ನು ಸಮೀಕ್ಷಾ ತಂಡದ ಮುಖಾಂತರವೇ ಕೈಗೊಳ್ಳಲಾಗಿದ್ದು ನಿರ್ದಿಷ್ಟವಾಗಿ ತಪ್ಪನ್ನೆಸಗಿರುವ ಅಧಿಕಾರಿ / ಸಿಬ್ಬಂದಿಯ ಮೇಲೆ ಕ್ರಮ ಕೈಗೊಳ್ಳಲಾಗುವುದು'

ಶ್ರೀ ಹೊನ್ನಾಳಿ ಜಬ್ಬಾರ್ ಖಾನ್ ಹಯತ್ ಖಾನ್ ಮಾನ್ಯ ಅಧ್ಯಕ್ಷರೆ, ಸರ್ಕಾರದಿಂದ ಉತ್ತರವನ್ನು ಕೊಟ್ಟಿದ್ದಾರೆ ಆದರೆ ಹಳದಿ ಕಾರ್ಡ್ ಏನು ಇದೆ ಇದರಲ್ಲಿ ಬಹಳ ಲೋಪದೋಷಗಳು ಇದ್ದು,- ಇದು ಸರ್ಕಾರದ ಗಮನಕ್ಕೆ ಬಂದಿದ್ದರೂ ಕೂಡ ಇದನ್ನು 9 ತಿಂಗಳುಗಳಾದರೂ ಸರಿಪಡಿಸಲು ಆಗದೇ ಇರುವುದಕ್ಕೆ ಕಾರಣ ಏನು ? ಎರಡನೆಯದಾಗಿ, ಕಳೆದ 9 ತಿಂಗಳುಗಳಿಂದ ನನ್ನ ಮಹಾನಗರದಲ್ಲಿ ಸೀಮೆಎಣ್ಣೆ ಮತ್ತು ಆಹಾರಧಾನ್ಯಗಳನ್ನು ಪೂರೈಸಲಿಲ್ಲ ಇದಕ್ಕೆ ಕಾರಣವೇನು? ಹಲವು ಕಾರ್ಡ್‌ಗಳಲ್ಲಿ ಬಹಳ ಲೋಪದೋಷಗಳಿವೆ ಅದರಲ್ಲಿ ಗಂಡುಮಕ್ಕಳು ಹೆಣ್ಣು ಮಕ್ಕಳಾಗಿದ್ದಾರೆ, ಹೆಣ್ಣು ಮಕ್ಕಳು ಗಂಡು ಮಕ್ಕಳಾಗಿದ್ದಾರೆ ಈ ರೀತಿಯಾಗಿರುವುದನ್ನು ಇದುವರೆಗೂ ಸರಿಪಡಿಸಿಲ್ಲ ನಿಮ್ಮ ಇಲಾಖೆಯ ಸಿಬ್ಬಂದಿಯವರು ಹಳೆಯ ಕಾರ್ಡುಗಳನ್ನೂ ತೆಗೆದುಕೊಂಡಿದ್ದಾರೆ, ಹೊಸ ಕಾರ್ಡುಗಳನ್ನೂ ತೆಗೆದುಕೊಂಡಿದ್ದಾರೆ, ಇದುವರೆಗೂ ಯಾವ ಕಾರ್ಡನ್ನೂ ಹಂಚಿಲ್ಲ ಬಡವರ ಪರಿಸ್ಥಿತಿ ಬಹಳ ಕೆಟ್ಟಿದೆ ಆದ್ದರಿಂದ, ಯಾವಾಗ ಆಹಾರಧಾನ್ಯಗಳನ್ನು ಪೂರೈಸುತ್ತೀರಿ, ಇದೆಲ್ಲವನ್ನು ಯಾವಾಗ ಸರಿಪಡಿಸುತ್ತೀರಿ ಎನ್ನುವುದನ್ನು ಹೇಳಬೇಕು ಅಗ್ಗದ ದರದ ಅಂಗಡಿಗಳು ಖರ್ಚು ಹಾಕಿಕೊಂಡು ಹೋಗುತ್ತಿವೆ ಆದರೆ ಜನರಿಗೆ ಸೀಮೆಎಣ್ಣೆಯಾಗಲೀ, ಆಹಾರ ಧಾನ್ಯಗಳಾಗಲೀ ಯಾವುದೂ ಸಿಗುತ್ತಿಲ್ಲ ಆದ್ದರಿಂದ, ಇದರ ಬಗ್ಗೆ ತಾವು ಏನು ಕ್ರಮ ತೆಗೆದುಕೊಳ್ಳುತ್ತೀರಿ ಎನ್ನುವುದನ್ನು ವಿವರವಾಗಿ ಹೇಳಬೇಕು

ಶೀ ಗೋವಿಂದ ಎಂ ಕಾರಜೋಳ ಸನ್ಮಾನ್ಯ ಅಧ್ಯಕ್ಷರೇ, 2005ರ ಡಿಸೆಂಬರ್ ನಲ್ಲಿ ಮನೆ ಮನೆ ಸರ್ವೆ ಮಾಡಿದ ಆಧಾರದ ಮೇಲೆ ನಾವು ಕಾರ್ಡುಗಳನ್ನು ವಿತರಣೆ ಮಾಡಿದೆವು ವಿತರಣೆ ಮಾಡಿದ ನಂತರ, ಅದರಲ್ಲಿ ಲೋಪದೋಷಗಳಾಗಿವೆ ಎನ್ನುವ ಕೂಗು ಇಡೀ ರಾಜ್ಯದ ತುಂಬ ಎದ್ದಮೇಲೆ, ಮತ್ತೆ ಅರ್ಜಿ ಕೊಡಲಿಕ್ಕೆ ನಾವು ಅವಕಾಶ ಮಾಡಿಕೊಟ್ಟೆವು ಹೀಗೆ ಅವಕಾಶ ಮಾಡಿಕೊಟ್ಟಂಥ ಸಂದರ್ಭದಲ್ಲಿ 64 ಲಕ್ಷ 70 ಸಾವಿರ ಹೊಸ ಅರ್ಜಿಗಳು ಬಂದಿವೆ ಬಿ ಪಿ ಎಲ್ ಕಾರ್ಡ್ ಕೇಳಿದವರ ಸಂಖ್ಯೆಯೇ ಹೆಚ್ಚಿದೆ ಆದರೆ, ಈಗಾಗಲೇ ರಾಜ್ಯದಲ್ಲಿ ಬಿ ಪಿ ಎಲ್ ಕಾರ್ಡ್ ಕೊಟ್ಟಿರುವಂಥಾದ್ದು 65 ಲಕ್ಷ 55 ಸಾವಿರ ಈಗ ಬಂದಿರುವ ಹೊಸ ಅರ್ಜಿಗಳ ಸಂಖ್ಯೆ 64 ಲಕ್ಷ 70 ಸಾವಿರ ಎಂದರೆ, ನಾವು ಯಾವ ರೀತಿಯಲ್ಲಿ ಕಾರ್ಡುಗಳನ್ನು ಕೊಡಲಿಕ್ಕೆ ಸಾಧ್ಯವಾಗುತ್ತದೆ ಬೆಂಗಳೂರು ಹೊರತುಪಡಿಸಿ, ಗ್ರಾಮಾಂತರ ಪ್ರದೇಶಗಳಲ್ಲಿ ಒಟ್ಟು 1 ಕೋಟಿ 10 ಲಕ್ಷ

ಕುಟುಂಬಗಳಿದ್ದರೆ, 1 ಕೋಟಿ 28 ಲಕ್ಷ ಅರ್ಜಿಗಳು ಬಿ ಪಿ ಎಲ್ ಕಾರ್ಡುಗಳಿಗಾಗಿ ಬಂದರೆ, ಎಷ್ಟು ಬೋಗಸ್ ಅರ್ಜಿಗಳು ಬರುತ್ತಿವೆ ಎನ್ನುವುದನ್ನು ತಾವು ಆರ್ಥಮಾಡಿಕೊಳ್ಳಬೇಕಾಗುತ್ತದೆ ಅದಕ್ಕಾಗಿ ನಾನು ಈ ಸದನದ ಎಲ್ಲ ಸದಸ್ಯರಲ್ಲಿ ವಿನಂತಿ ಮಾಡುತ್ತಿದ್ದೇನೆ, ಈಗಾಗಲೇ ನಾವು ಮನೆ ಮನೆಗೆ ಹೋಗಿ ಮತ್ತೆ ಅರ್ಜಿಗಳನ್ನು ಸ್ವೀಕರಿಸಿದ್ದು, ಅವುಗಳನ್ನು ಪರಿಶೀಲನೆ ಮಾಡತಕ್ಕಂಥ ಕೆಲಸ ಮಾಡಿದ್ದೇವೆ ಈಗಾಗಲೇ ಶೇ 80ಕ್ಕಿಂತಲೂ ಹೆಚ್ಚಿನ ಅರ್ಜಿಗಳು ಪರಿಶೀಲನೆಯಾಗಿವೆ ಜನವರಿ 30ನೇ ತಾರೀಖಿನೊಳಗೆ ಎಲ್ಲ ಅರ್ಜಿಗಳ ಪರಿಶೀಲನೆ ಆಗಬೇಕು ಎಂದು ನಾವು ಕೊನೆಯ ದಿನಾಂಕವನ್ನು ಕೊಟ್ಟಿದ್ದೆವು ಈಗಾಗಲೇ ಪರಿಶೀಲನೆ ಮಾಡಿದ್ದಾರೆ ಜನವರಿ 30 ಕೊನೆಯ ದಿನಾಂಕ ಎಂದರೆ, ಅದು ಮುಗಿದು ಕೇವಲ 2 ದಿವಸವಷ್ಟೇ ಆಗಿದೆ ಉಳಿದ ಶೇ 20ರ ಬಗ್ಗೆಯೂ ಕೂಡ ಮಾಹಿತಿ ತರಿಸಿ ಆದಷ್ಟು ಬೇಗನೆ ಕಾರ್ಡುಗಳನ್ನು ಕೊಡತಕ್ಕಂಥ ವ್ಯವಸ್ಥೆ ಮಾಡುತ್ತೇವೆ

ಶ್ರೀ ಜಿ ವಿ ಶ್ರೀರಾಮರೆಡ್ಡಿ ಕಾರಜೋಳರವರೇ, ಜನವರಿ 30ನೇ ತಾರೀಖು ಎಂದು ಲಾಸ್ಟ್ ಡೇಟ್ ಕೊಟ್ಟಿದ್ದಿರಿ ಇವತ್ತು ಫೆಬವರಿ 2 ತಾವು ಏನು ಮಾಹಿತಿ ತರಿಸಿದ್ದೀರಿ? ಮೂರು ವರ್ಷವಾಯಿತು, ಇದುವರೆಗೂ ಈ ಸರ್ಕಾರಕ್ಕೆ ಕಾರ್ಡ್ ವ್ಯವಸ್ಥೆ ಸರಿ ಮಾಡಲಿಕ್ಕಾಗಲಿಲ್ಲ

(ಗೊಂದಲ)

(ವಿರೋಧ ಪಕ್ಷಗಳ ಅನೇಕ ಸದಸ್ಯರು ಏಕಕಾಲದಲ್ಲಿ ಮಾತನಾಡುತ್ತಿದ್ದರು)

ಅಧ್ಯಕ್ಷರು ದಯಮಾಡಿ ಕುಳಿತುಕೊಳ್ಳಿ ಈ ರೀತಿ ಎಲ್ಲರೂ ಒಟ್ಟಿಗೇ ಎದ್ದು ನಿಂತುಕೊಂಡರೆ ಹೇಗೆ? ದಯಮಾಡಿ ಒಬ್ಬೊಬ್ಬರಾಗಿ ಮಾತನಾಡಿ ದಯಮಾಡಿ ಕುಳಿತುಕೊಳ್ಳಿ, ಅವರು ಉತ್ತರ ಹೇಳುತ್ತಾರೆ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ ನಿಮ್ಮ ನಾಯಕರು ನಿಂತಿದ್ದಾರೆ ವಿರೋಧ ಪಕ್ಷ ನಾಯಕರು ನಿಂತಾಗ ಎಲ್ಲರೂ ನಿಂತುಕೊಂಡುಬಿಟ್ಟರೆ ಹೇಗೆ? ಎಲ್ಲರಿಗೂ ನಾವು ಟೈಮಿಂಗ್ ಕೊಟ್ಟಾಯಿತು, ಎಲ್ಲವನ್ನೂ ಕೊಟ್ಟಾಯಿತು ಏನೂ ಪ್ರಯೋಜನವಾಗಲಿಲ್ಲ

ಶ್ರೀ ಎನ್ ಧರಂಸಿಂಗ್ ಮಾನ್ಯ ಅಧ್ಯಕ್ಷರೇ, ನಮ್ಮ ಸುದೈವಕ್ಕೆ ಮಾನ್ಯ ಯಡಿಯೂರಪ್ಪನವರು ಈಗ ಸದನದಲ್ಲೇ ಇದ್ದಾರೆ ಹಿಂದೆ ನಾನು ಸಮ್ಮಿಶ್ರ ಸರ್ಕಾರದ ಮುಖ್ಯಮಂತಿಯಾಗಿದ್ದ ಸಂದರ್ಭದಲ್ಲಿ, ಯಡಿಯೂರಪ್ಪನವರು ಪತಿಪಕ್ಷದ ನಾಯಕರಾಗಿ ನನ್ನ ಜಾಗದಲ್ಲಿ ಕುಳಿತು, ಮೊಟ್ಟಮೊದಲನೆಯದಾಗಿ ಪಡಿತರ ಚೀಟಿ ವಿತರಣೆ ಬಗ್ಗೆ ಪ್ರಸ್ತಾಪ ಮಾಡಿದ್ದರು ಎಲ್ಲ ಸದಸ್ಯರು ಕೂಡ ಚರ್ಚೆಯಲ್ಲಿ ಭಾಗವಹಿಸಿದ್ದರು 3ನೇ ತಾರೀಖಿಗೆ ಇವರ ಸರ್ಕಾರ ಅಧಿಕಾರಕ್ಕೆ ಬಂದು ಒಂದು ವರ್ಷ ತುಂಬುತ್ತಿದೆ ಇವತ್ತು ಕಾರಜೋಳರವರು ಹೇಳುತ್ತಿರತಕ್ಕಂಥಾದ್ದರ ಬಗ್ಗೆ ನಮ್ಮ ಆಕ್ಷೇಪಣೆ ಇಲ್ಲ ಅದು ವ್ಯವಹಾರಿಕವಾಗಿ ಸರಿ ಇರಬಹುದು ಆದರೆ

ಸ್ಪಷ್ಟವಾದಂಥ ಒಂದು ನಿರ್ಧಾರವನ್ನು, ಈ ರಾಜ್ಯದ ಬಡಜನತೆಗೆ ಹೇಳಬೇಕಾಗಿದೆ ಅವರ ಹೊಟ್ಟೆಗೆ ಅನ್ನ ಮುಟ್ಟತಕ್ಕಂಥ ರೀತಿಯಲ್ಲಿ ಪಡಿತರ ಚೀಟಿ ವಿತರಣೆ ಮಾಡತಕ್ಕಂಥ ಕೆಲಸ ಆಗಬೇಕು ರೈತರ ಬಗ್ಗೆ, ಬಡವರ ಬಗ್ಗೆ ಮಾತನಾಡತಕ್ಕಂಥ ಈ ಸಮ್ಮಿಶ್ರ ಸರ್ಕಾರದ ಉಪಮುಖ್ಯಮಂತ್ರಿಗಳಾದ ಯಡಿಯೂರಪ್ಪನವರು ಈ ಸದನದಲ್ಲಿದ್ದು, ಅವರು ಒಂದು ನಿರ್ದಿಷ್ಟವಾದಂಥ ಹೇಳಿಕೆಯನ್ನು ಈ ಸದನಕ್ಕೆ ಕೊಡಬೇಕು ಎಲ್ಲಿಯವರೆಗೆ ಡಿಮ್ಯಾಂಡ್ ಸರ್ವೆ ಆಗುತ್ತಿದೆ? ಎಲ್ಲಿಯವರೆಗೆ ಅದನ್ನು ಮಾಡುತ್ತಾ ಹೋಗುತ್ತೀರಿ? ಇದು ಶೀರಾಮರೆಡ್ಡಿಯವರು ಮತ್ತು ಎಲ್ಲ ಸದಸ್ಯರೂ ಕೇಳತಕ್ಕಂಥ ಪಶ್ನೆ ಅದನ್ನು ಇಲ್ಲಿ ಜಬ್ಬಾರ್ ಖಾನೆ ಹೊನ್ನಾಳಿಯವರು ಕೇಳಿದ್ದಾರೆ ಇವತ್ತು ಈ ರಾಜ್ಯದ ಜನತೆಗೆ ಹೊಟ್ಟೆಗೆ ಅನ್ನವಿಲ್ಲ ಕೇವಲ ಸಮಾವೇಶದ ಮೂಲಕ, ಹೇಳಿಕೆ ಮೂಲಕ ಹೊಟ್ಟೆ ತುಂಬುವುದಿಲ್ಲ ಈ ಕಾರ್ಯಕಮದ ಬಗ್ಗೆ ಯಾವಾಗ ನಿರ್ಧಾರ ತೆಗೆದುಕೊಳ್ಳುತ್ತೀರಿ, ಯಾವಾಗ ಮಾಡುತ್ತೀರಿ ಎನ್ನತಕ್ಕಂಥಾದ್ದನ್ನು ಹೇಳಬೇಕು ಈ ಬಗ್ಗೆ ತಮ್ಮ ಸ್ಪಷ್ಟವಾದ ನಿಲುವೇನು ಎನ್ನುವುದನ್ನು ಸ್ಪಷ್ಟಪಡಿಸಬೇಕು

ಶೀ ಜಿ ವಿ ಶೀರಾಮರೆಡ್ಡಿ ಮಾನ್ಯ ಅಧ್ಯಕ್ಷರೇ, ಇದಕ್ಕೆ ಸಂಬಂಧಪಟ್ಟಹಾಗೆ ನನ್ನದೂ ಒಂದು ಪಶ್ನೆ ಇದೆ

ಅಧ್ಯಕ್ಷರು ಇದರ ಬಗ್ಗೆ ಬಹಳ ಜನ ಮಾತನಾಡುವವರಿದ್ದಾರೆ ಆದ್ದರಿಂದ ಇದನ್ನು ಅರ್ಧ ಗಂಟೆ ಚರ್ಚೆಯಾಗಿ ನಾಳೆ ತೆಗೆದುಕೊಳ್ಳುತ್ತೇನೆ ಆಯಿತು, ಇದನ್ನು ಅರ್ಧ ಗಂಟೆ ಚರ್ಚೆಯನ್ನಾಗಿ ಕನ್ವರ್ಟ್ ಮಾಡೋಣ

ಕೊಬ್ಬರಿಗೆ ಬೆಂಬಲ ಬೆಲೆ ನಿಗದಿ ಮಾಡುವುದು

53(422) ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೊಬ್ಬರಿ ಬೆಲೆ ಕುಸಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ,

ಆ) ಕೊಬ್ಬರಿಗೆ ಬೆಂಬಲ ಬೆಲೆ ನಿಗದಿ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ,

ಇ) ಇದುವರೆಗೂ ಕೊಬ್ಬರಿಗೆ ಬೆಂಬಲ ಬೆಲೆ ನೀಡಿರುವುದೆಷ್ಟು ?

ಶ್ರೀ ಶರಣ ಬಸಪ್ಪ ದರ್ಶನಾಪೂರ್ (ಕೃಷಿ ಮಾರುಕಟ್ಟೆ ಸಚಿವರು)

ಅ) ಹೌದು

ಆ) ಕೊಬ್ಬರಿಗೆ ಬೆಂಬಲ ಬೆಲೆಯನ್ನು ಪ್ರತಿ ವರ್ಷ ಕೇಂದ್ರ ಸರ್ಕಾರವು ನಿಗದಿ ಮಾಡುತ್ತದೆ 2006-07ನೇ ಸಾಲಿನಲ್ಲಿ ಉಂಡೆ ಕೊಬ್ಬರಿಗೆ ಕ್ವಿಂಟಾಲ್ ಒಂದಕ್ಕೆ ರೂ 3840/- ಹಾಗೂ ಮಿಲ್ಲಿಂಗ್ ಕೊಬ್ಬರಿಗೆ ರೂ 3590/- ಗಳ ಬೆಂಬಲ ಬೆಲೆ ನಿಗದಿಪಡಿಸಿದೆ ರಾಜ್ಯ ಸರ್ಕಾರ ರೈತರ